ಶ್ರೀ ಕಾಗೋಡು ತಿಮ್ಮಪ್ಪ.—ಸೇರಿಸಿಕೊಳ್ಳುವುದಕ್ಕೇನೂ ತೊಂದರೆ ಇಲ್ಲ. ಆದರ ಜೊತೆಗೆ ಇನ್ನೂ ನಾಲ್ಕಾರು ರಸ್ತೆಗಳನ್ನು ಸೇರಿಸಿಕೊಳ್ಳಬಹುದು ಎಂದು ಒಬ್ಬರು ಹೇಳಿದರು ಒಂದೊಂದು ರಸ್ತೆಯನ್ನು ತೆಗೆದುಕೊಂಡರೆ ಆದರಂತೆ ಎಲ್ಲರೂ ಹೇಳಿದ್ದನ್ನು ತೆಗೆದುಕೊಳ್ಳಬೇಕಾಗುತ್ತದೆ. ಆದರೆ ಮುಂದೆ ನಮ್ಮ ಹಣಕಾಸಿನ ಪರಿಸ್ಥಿತಿ ಸುಧಾರಿಸಿದಾಗ, ಹಣಕಾಸಿನ ಪರಿಸ್ಥಿತಿಯು ಅನುಕೂಲತೆ ಕಂಡು ಬಂದಾಗ, ಯಾವ್ಯಾವ ರಸ್ತೆಗಳನ್ನು ತೆಗೆದುಕೊಳ್ಳಬೇಕು ಎಂದು ಪರಿಶೀಲನೆಗೆ ಬಂದಾಗ ತಾವು ಹೇಳಿದುದನ್ನೂ ಸಹ ನಾನು ಗಮನದಲ್ಲಿಟ್ಟುಕೊಳ್ಳುತ್ತೇನೆ.

Thermal Power Station Raichur

935 SRI C. APPAJI (Kanakapura).—Will the Minister of State for Power be pleased to state.—

(a) the additional Power generated during 1980-81.

(b) when is the Thermal power Station due to be completed

(c) the expenditure incurred so far whether any assistance has been provided by the Centre for the Project

(d) when completed whether it would help the State to achieve self-sufficiency?

SRI G.H. ASWATHA REDDY (Minister of State for Power).—

(a) 918 MU.

(b) The first stage of the Raichur Thermal Power Project envisages installation of 2 Units of 210 KV each. The first unit is scheduled to be commissioned by January 1984 and the second unit by July 1984.

(c) The total expenditure incurred on Raichur Thermal Power Project stage-I upto the end of February 1982 is Rs. 89.51 Crores. This Project is being executed as part of the State Plan. No Central assistance is provided for this Project.

(d) When the Raichur Thermal Power Project stage-I work are completed an additional energy of 2284 MU would be supplied to the grid annually. However, even with this additional power, the State cannot achieve self sufficiency in view of growing demand for power.

ಶ್ರೀ ಸಿ. ಅಪ್ಪಾಜಿ.—ತಾವು ಇದರಲ್ಲಿರುವ (ಈ) ಪ್ರಶ್ನೆಗೆ ಉತ್ತರವಾಗಿ ಈಗ ಇರತಕ್ಕಂಥಾ ವಿದ್ಯುಚ್ಛಕ್ತಿ ಉತ್ಪತ್ತಿಯಲ್ಲಿ ವಿದ್ಯುಚ್ಛಕ್ತಿಯ ಹೆಚ್ಚಿನ ಬೇಡಿಕೆಯಿಂದಾಗಿ ಹೆಚ್ಚಿನ ವಿದ್ಯುಚ್ಛಕ್ತಿ ಇದ್ದರೂ ಕೂಡ ರಾಜ್ಯವು ಸ್ವಾವಲಂಬನೆಯನ್ನು ಸಾಧಿಸುವುದಿಲ್ಲ ಅಂತ ಹೇಳಿದ್ದೀರಿ. ಹಾಗದರೆ ಎಷ್ಟು ಕೊರತೆ ಇದೆ? ನಮ್ಮ ರಾಜ್ಯದಲ್ಲಿ ಒಂದು ಆರ್ಥಿಕ ಪ್ರಗತಿಯನ್ನು ಸಾಧಿಸಬೇಕಾದರೆ ವಿದ್ಯುಚ್ಛಕ್ತಿ ಬಹಳ ಅವಶ್ಯಕತೆ ಇರುವುದರಿಂದ, ರಾಜ್ಯವು ಇದರ ಸ್ವಾವಲಂಬನೆಯನ್ನು ಸಾಧಿಸುವುದಿಲ್ಲ ಎಂದರೆ ಅದು ಸರಿಹೋಗುತ್ತದೆಯೇ ? ಮುಂದಾದರೂ ಈ ಬಗ್ಗೆ ಸ್ವಾವಲಂಬನೆಯನ್ನು ಸಾಧಿಸುವುದಕ್ಕೆ ರಾಜ್ಯ ಸರ್ಕಾರದವರು ಏನೇನು ಕಾರ್ಯಕ್ರಮ ಹಾಕಿಕೊಂಡಿದ್ದಾರೆ ಅನ್ನುವುದನ್ನಾದರೂ ಹೇಳುತ್ತೀರಾ ?

ಶ್ರೀ ಜಿ. ಹೆಚ್. ಅಶ್ವತ್ಥರೆಡ್ಡಿ.—ಅಧ್ಯಕ್ಷರೇ, ಮಾನ್ಯ ಸದಸ್ಯರಿಗೆ ಹೇಳಬೇಕಾದರೆ ನಮ್ಮಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆ ಜಾಸ್ತಿಯಾದ ಹಾಗೆಲ್ಲಾ ಬೇಡಿಕೆಗಳೂ ಕೂಡ ಅಷ್ಟರಮಟ್ಟಿಗೆ ಬರುತ್ತಾ ಇದೆ. ಈ ದೃಷ್ಟಿಯಿಂದ ನಾವು ಸ್ವಾವಲಂಬನೆಯನ್ನು ಇನ್ನೂ ಸಾಧಿಸುವುದಕ್ಕೆ ಆಗಿಲ್ಲಾ. ವಿದ್ಯುಚ್ಛಕ್ತಿಯನ್ನು ಹೆಚ್ಚು ಹೆಚ್ಚು ಉತ್ಪಾದನೆ ಮಾಡುವುದಕ್ಕೆ ನಮ್ಮ ರಾಜ್ಯದಲ್ಲಿ ಸಾಧ್ಯತೆ ಇದೆ. ಮೇಕೆದಾಟು ಇದೆ, ಕಾವೇರಿ ಯೋಜನೆ ಇದೆ, ಆದರೆ ಈ ಕಾವೇರಿ ಯೋಜನೆ ಬಗ್ಗೆ ತಮಿಳುನಾಡಿಗೂ ನಮ್ಮ ಕರ್ನಾಟಕ ಸರ್ಕಾರಕ್ಕೂ ವಾದ ವಿವಾದ ಇರುವುದರಿಂದ ಆ ಕೆಲಸಹಾಗೆಯೇ ನಿಂತಿದೆ, ಇದಲ್ಲದೇ ಅಪ್ಪರ್ ಕೃಷ್ಣಾ ಯೋಜನೆ ಇದೆ, ಇವೆಲ್ಲಾ ಯೋಜನೆಗಳು ಇವೆ, ಇದರಿಂದ ನಮ್ಮ ರಾಜ್ಯಕ್ಕೆ ಹೆಚ್ಚು ವಿದ್ಯುತ್ ಉತ್ಪಾದನೆಯೂ ಸಹ ಆಗುತ್ತದೆ. ಆದರೆ ಒಂದೇ ಸಲ ಇದರ ಕೊರತೆಯನ್ನು ಕಡಿಮೆ ಮಾಡುವುದಕ್ಕೆ ಆಗುವುದಿಲ್ಲ. ವರ್ಷೇ ವರ್ಷೇ ಹಂತ ಹಂತವಾಗಿ ಈ ಯೋಜನೆಗಳನ್ನು ತೆಗೆದುಕೊಂಡು, ಸರ್ಕಾರವೂ ಸಹ ಇದರ ಬಗ್ಗೆ ಹೆಚ್ಚಿನ ಗಮನ ಕೊಟ್ಟು ಈ ವಿದ್ಯುತ್ ಕೊರತೆಯನ್ನು ನಿವಾರಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತದೆ ಎಂದು ಹೇಳಬಯಸುತ್ತೇನೆ.

ಶ್ರೀ ಸಿ. ಅಪ್ಪಾಜಿ.—ತಮ್ಮ ಉತ್ತರದಲ್ಲಿ ಕೇಂದ್ರಸರ್ಕಾರದಿಂದ ವಿದ್ಯುಚ್ಛಕ್ತಿ ಉತ್ಪಾದನೆಗೆ ನೆರವನ್ನು ಪಡೆಯುತ್ತಿಲ್ಲವೆಂದು ತಿಳಿಸಿದ್ದೀರಿ. ಕೇಂದ್ರ ಸರ್ಕಾರದ ನೆರವನ್ನು ಪಡೆದು ವಿದ್ಯುಚ್ಛಕ್ತಿ ಕೊರತೆಯನ್ನು ಹೋಗಲಾಡಿಸಲಿಕ್ಕೆ ಆದಷ್ಟು ಜಾಗ್ರತೆ ಸರ್ಕಾರ ಪ್ರಯತ್ನ ಮಾಡುತ್ತದೆಯೇ ?

ಶ್ರೀ ಜಿ. ಎಚ್. ಅಶ್ವತ್ಥರೆಡ್ಡಿ.—ನಮ್ಮ ರಾಜ್ಯ ಸರ್ಕಾರದಿಂದಲೇ ೯೦ ಕೋಟಿ ರೂಪಾಯಿ ಕೊಡಲಾಗಿದೆ. ಆದ್ದರಿಂದ ವಿದ್ಯುಚ್ಛಕ್ತಿ ಉತ್ಪಾದನೆಗೆ ತೊಂದರೆ ಏನಿಲ್ಲ. ರಾಜ್ಯಸರ್ಕಾರವೇ ಉತ್ತೇಜನ ಕೊಡುತ್ತಿರುವುದರಿಂದ ಎಲ್ಲಾ ಪ್ರಾಜೆಕ್ಟ್‌ಗಳು ಚೆನ್ನಾಗಿ ನಡೆಯುತ್ತಿವೆ.

SRI WILLIAM ST. JAHN SINCLAIR MARLEY.— Mr. Speaker, Sir, in reply to question (d) in the second half, it is stated that even with the additional power, the State cannot achieve self sufficiency in view of growing demand for power. May I request the Government to consider very serioualy to putting a moratorium to further industrialisation in the State until such time the power situation is such that it could meet the present demand and what might be projected in the next ten years ?

ಶ್ರೀ ಜಿ. ಎಚ್. ಅಶ್ವತ್ಥರೆಡ್ಡಿ.—ಮಾನ್ಯ ಸದಸ್ಯರು ಹೇಳಿದ ತರಹ ಮಾಡಲಿಕ್ಕೆ ಆಗುವುದಿಲ್ಲ. ಪವರ್ ಜನರೇಷನ್ ಜಾಸ್ತಿಯಾದಷ್ಟು ಇಂಡಸ್ಟ್ರಿಗಳು ಜಾಸ್ತಿ ಬೆಳೆಯುತ್ತಲೇ ಇವೆ. ಪವರ್ ಜನರೇಷನ್ ಜಾಸ್ತಿ ಮಾಡಿ ಇಂಡಸ್ಟ್ರಿಗಳಿಗೆ ಕೊಡದೇ ಹಾಗೆ ಇಟ್ಟುಕೊಳ್ಳಬೇಕೆಂದು ಹೇಳುವುದನ್ನು ಒಪ್ಪಲಿಕ್ಕೆ ಆಗುವುದಿಲ್ಲ. ನಾವು ಹೆಚ್ಚು ಉತ್ಪತ್ತಿ ಮಾಡಿದಷ್ಟು ಇಂಡಸ್ಟ್ರಿಗಳು ಬೆಳೆಯುತ್ತಿವೆ. ಒಂದಕ್ಕೊಂದು ಜೊತೆಯಲ್ಲೇ ಹೋಗುತ್ತಾ ಇರಬೇಕು.

ಶ್ರೀ ಎಂ. ಚಂದ್ರಶೇಖರ್.—ಕೇಂದ್ರದಿಂದ ಯಾವ ಹಣ ತೆಗೆದುಕೊಳ್ಳುವುದಿಲ್ಲ. ರಾಜ್ಯದ ವತಿಯಿಂದ ಮಾಡುತ್ತೇವೆಂದು ಮಾನ್ಯ ಮಂತ್ರಿಗಳು ತಿಳಿಸಿದರು. ನಮ್ಮ ಅನುಭವ ಹೇಳಬೇಕೆಂದರೆ, ಕಾವೇರಿ ಯೋಜನೆಗಳನ್ನು ರಾಜ್ಯ ಮಟ್ಟದಲ್ಲೇ ತೆಗೆದುಕೊಳ್ಳುತ್ತೇವೆಂದು ಹೇಳಿ ಸುಮಾರು ಹತ್ತಾರು ವರ್ಷದಿಂದಲೂ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಇದನ್ನು ತಾವು ರಾಜ್ಯ ಸರ್ಕಾರದ ಬೊಕ್ಕಸದಿಂದು ಮಾಡುತ್ತೇವೆಂದು ಹೇಳಿದರೆ ಕಾಲಕ್ಕೆ ಸರಿಯಾಗಿ ಆಗುವುದಿಲ್ಲ, ಬೇರೆ ರಾಜ್ಯ ಸರ್ಕಾರಗಳು ಕೇಂದ್ರದ ಮೇಲೆ ಒತ್ತಾಯ ತಂದು ಹಣ ಪಡೆದುಕೊಳ್ಳುವಂತೆ ನಮ್ಮ ರಾಜ್ಯಸರ್ಕಾರ ಕೂಡ ಕೇಂದ್ರದ ಮೇಲೆ ಒತ್ತಾಯ ತಂದು ಹಣ ಪಡೆದು ಆದಷ್ಟು ಬೇಗನೆ ಯೋಜನೆಯನ್ನು ಪೂರ್ತಿ ಮಾಡಲಿಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಜಿ. ಎಚ್. ಅಶ್ವತ್ಥರೆಡ್ಡಿ.— ರಾಯಚೂರು ಥರ್ಮಲ್‌ಪ್ಲಾಂಟ್‌ಗೆ ಮೊದಲು ೯೦ ಕೋಟಿ ರೂಪಾಯಿ ಕೊಟ್ಟಿದ್ದು ಈ ವರ್ಷ ೬೦ ಕೋಟಿ ರೂಪಾಯಿ ಕೊಟ್ಟಿದೆ. ೧೯೮೪ರ ಜನವರಿ ಹಾಗೂ ಜುಲೈ ತಿಂಗಳಲ್ಲಿ ಎರಡು ಘಟಕವು ಕಾರ್ಯಾಚರಣೆಗೊಳ್ಳುತ್ತವೆ. ಕೇಂದ್ರ ಸರ್ಕಾರ ಹಣ ಕೊಡದೇ ಇದ್ದರೂ ನಮ್ಮ ಸರ್ಕಾರ ಆ ಕೆಲಸ ಮಾಡುತ್ತಿದೆ. ಮಾನ್ಯ ಸದಸ್ಯರು ಒಳ್ಳೆಯ ಸಲಹೆಯನ್ನು ಕೊಟ್ಟಿ

ದ್ದೀರಿ. ಇತರೆ ಬೇರೆ ಪ್ರಾಜೆಕ್ಟ್‌ಗಳಿಗೆ ಕೇಂದ್ರಸರ್ಕಾರದಿಂದ ಹಣ ಪಡೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಥರ್ಮಲ್ ಪವರ್ ಸ್ಟೇಷನ್‌ಗೆ ಜನರೇಟರ್ಸ್ ಎಲ್ಲಿಂದ ಕೊಂಡು ಕೊಳ್ಳುತ್ತೀರಾ ?

ಶ್ರೀ ಜಿ. ಎಚ್. ಅಶ್ವತ್ಥ ರೆಡ್ಡಿ.—ನಮ್ಮ ದೇಶದಲ್ಲಿರತಕ್ಕ ಬಿ. ಎಚ್. ಇ. ಎಲ್, ಕಾರ್ಖಾನೆಯಿಂದಲೇ ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಕಾಳಿನದಿ ಯೋಜನೆಯಲ್ಲಿ ಇನ್‌ಸ್ಟಾಲ್ ಆಗಿರತಕ್ಕ ಈ ಒಂದ ಪವರ್ ಜನರೇಟರ್ಸ್ ಯೂನಿಟ್ ೫೯ ಸಲ ಕೆಟ್ಟುಹೋಗಿದೆ. ಅಲ್ಲಿ ಮೂರು ಯೂನಿಟ್‌ಗಳು ಸಿಕ್ಸ್ ಯೂನಿಟ್‌ಗಳಾಗಿವೆ. ಬಿ.ಹೆಚ್.ಇ.ಎಲ್. ಇಂಜಿನಿಯರ್ಸ್ ಒಂದು ವರ್ಷದವರೆಗೆ ಅದನ್ನು ಸರಿಪಡಿಸಿಕೊಂಡು ಬಂದರು. ಆದರೂ ಅದು ಕೆಟ್ಟುಹೋಗುತ್ತಲೇ ಇದೆ, ನಮ್ಮ ದೇಶದಲ್ಲಿರತಕ್ಕ ಬಿ.ಹೆಚ್.ಇ.ಎಲ್.ನಿಂದ ಥರ್ಮಲ್ ಪ್ಲಾಂಟ್ ತೆಗೆದುಕೊಂಡು ಹೋಗಿರುವ ಕಡೆಯಲ್ಲೆಲ್ಲಾ ಇದೇ ಪರಿಸ್ಥಿತಿ ಇದೆ. ಇನ್ನು ಮುಂದಾದರೂ ಕೂಡ ಕೇಂದ್ರ ಸರ್ಕಾರದೊಡನೆ ವ್ಯವಹರಿಸಿ ಬೇರೆ ಕಡೆ ಕೊಂಡುಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತೀರಾ ? ಇನ್ನು ಆಂಧ್ರಪ್ರದೇಶದಲ್ಲಿ ಸರ್‌ಪ್ಲಸ್ ಪವರ್ ಇದ್ದರೂ ಅಲ್ಲಿ ನ್ಯೂಕ್ಲಿಯರ್ ಪವರ್‌ಸ್ಟೇಷನ್ ಆಗುತ್ತಿದೆ. ನಮ್ಮ ಸರ್ಕಾರ ಕೂಡ ಕೇಂದ್ರದ ಮೇಲೆ ಒತ್ತಾಯ ತಂದು ನ್ಯೂಕ್ಲಿಯರ್ ಪವರ್ ಜನರೇಟರ್ಸ್ ಪಡೆದುಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಜಿ. ಹೆಚ್. ಅಶ್ವತ್ಥ ರೆಡ್ಡಿ.—ಈಗ ಕೆಟ್ಟು ಹೋಗಿದ್ದಂಥ ಯಂತ್ರಗಳನ್ನು ರಿಪೇರಿ ಮಾಡಿಸಲಿಕ್ಕೆ ಫಾರಿನರ್ಸ್‌ನ್ನು ಕರೆಸಿ ಅವರ ಜೊತೆ ನಮ್ಮ ಇಂಜಿನಿಯರ್ಸ್ ಸೇರಿಕೊಂಡು ಸರಿಪಡಿಸಿದ್ದಾರೆ. ಆ ರೀತಿ ಏನಾದರೂ ಇದು ಪ್ರಯೋಜನಕ್ಕೆ ಬರುವುದಿಲ್ಲ ಎಂದರೆ ಬೇರೆ ದೇಶದಿಂದ ತರಿಸಲಿಕ್ಕೆ ಸರ್ಕಾರ ಸಿದ್ಧವಿದೆ. ನ್ಯೂಕ್ಲಿಯರ್ ಪವರ್ ಸ್ಟೇಷನ್ ಬಗ್ಗೆ ಈಗಾಗಲೇ ಸ್ಥಳ ಪರಿಶೀಲನೆಯಾಗಿದೆ. ಪತ್ರ ವ್ಯವಹಾರ ನಡೆಯುತ್ತಿದೆ.

ಶ್ರೀ ಎಂ. ಗಂಗಣ್ಣ.—ಅಧ್ಯಕ್ಷರೆ. ಈ ಯೋಜನೆಯ ಅಡಿಯಲ್ಲಿ ಜಮೀನು ಕಳೆದುಕೊಂಡ ರೈತರಿಗೆ ಸರ್ಕಾರದಿಂದ ಮಾರ್ಕೆಟ್ ಬೆಲೆ ಕಿಮ್ಮತ್ತು ಸಿಕ್ಕಿಲ್ಲ. ಈ ಬಗ್ಗೆ ಮಾನ್ಯ ಮಂತ್ರಿಗಳು ಏನು ಕ್ರಮ ತೆಗೆದುಕೊಳ್ಳುತ್ತೀರಾ ಎನ್ನುವುದನ್ನು ತಿಳಿಸಬೇಕು.

ಅಧ್ಯಕ್ಷರು.—ಅದು ಬೇರೆ ಪ್ರಶ್ನೆ.

ಶ್ರೀ ಸಿ. ಅಪ್ಪಾಜಿ.—ಒಂದು ಯೂನಿಟ್‌ಗೆ ಎಷ್ಟು ಕಾಸ್ಟ್ ಆಗುತ್ತದೆ ?

ಶ್ರೀ ಜಿ. ಹೆಚ್. ಅಶ್ವತ್ಥ ರೆಡ್ಡಿ.—೨೯ ಪೈಸೆ ಆಗುತ್ತದೆ.

Supply of X-Ray Plants and Dental Chairs to Gudibanda an Bagepalli Taluk.

974. SRI S. MUNIRAJU (Bagepalli).—Will the Minister for Health and Family Welfare be pleased to state :—

(a) the dates on which the Government Supplied X-Ray plants to Gudibanda and Bagepally ;

(b) whether these machines are functioning and technicians are posted ;

(c) when was the Dental chair supplied to Gudibanda Hospital and the doctor posted ?